ತಡವಾಗಿ ತಿಳಿದ ಸತ್ಯ



✍️ **ಶ್ರೀವಲ್ಲಿ ರೈ ಮಾರ್ಟೆಲ್**

ಒಂದು ಊರಿನಲ್ಲಿ ಒಬ್ಬ ರೈತ ತನ್ನ ಬೇಸಾಯದ ಹೊಲವನ್ನು ನೋಡಿಕೊಳ್ಳುತ್ತಿದ್ದನು. ಆ ಹೊಲದಲ್ಲಿ ಕೋತಿ, ಮೊಲ ನವಿಲು ಹಂದಿ, ಆಮೆ ಮತ್ತು ಹಕ್ಕಿಗಳು ತರಕಾರಿ, ಬತ್ತ ಜೋಳ ಮತ್ತು ಗೆಡ್ಡೆಗೆಣಸುಗಳನ್ನು ತಿಂದು ರೈತನಿಗೆ ಕಿರಿಕಿರಿ ಉಂಟುಮಾಡುತ್ತಿದ್ದವು. ರೈತ ಕೋಲು ಹಿಡಿದು ಅವುಗಳನ್ನು ಹೊಲದಿಂದ ಗದರಿಸಿ ಅಟ್ಟುತ್ತಿದ್ದನು.

ಈ ಪ್ರಾಣಿಗಳು ಆ ರೈತನ ಮೇಲೆ ತುಂಬಾ ಕೋಪಗೊಂಡಿದ್ದವು. "ಈ ರೈತ ಇಲ್ಲದಿದ್ದರೆ ನಾವು ಹೊಲದಲ್ಲಿ ನಮಗೆ ಬೇಕಾದಂತೆ ತಿನ್ನಬಹುದು, ಅವನು ಸತ್ತುಹೋಗಲಿ" ಎಂದು ಅಂದುಕೊಳ್ಳುತ್ತಿದ್ದವು.

ಒಂದು ದಿನ ಆಮೆ ಬಂದು ಒಂದು ಸುದ್ದಿ ತಿಳಿಸಿತು: "ಆ ಹೊಲದ ರೈತ ತೀರಿಕೊಂಡಿದ್ದಾನೆ."
ಇದನ್ನು ಕೇಳಿ ಎಲ್ಲಾ ಪ್ರಾಣಿ ಪಕ್ಷಿ ಗಳು ತುಂಬಾ ಖುಷಿಪಟ್ಟವು! "ಇಂದು ನಮಗೆ ಸ್ವಾತಂತ್ರ್ಯ! ಯಾರೂ ನಮ್ಮನ್ನು ಗದರಿಸುವವರು ಇಲ್ಲ" ಎಂದು ಸಂತೋಷದಲ್ಲಿ ಹಾರಾಡಿ ಕುಣಿದವು, ಮೋಜು ಮಾಡಿದವು.

ಆದರೆ ಒಂದು ವರ್ಷ ಕಳೆದ ನಂತರ, ಹೊಲದಲ್ಲಿ ಒಂದೇ ಒಂದು ಜೋಳದ ತೆನೆಯಾಗಲಿ, ತರಕಾರಿಯಾಗಲಿ ಇಲ್ಲದೆ ಎಲ್ಲಾ ಬಳ್ಳಿ ಗಿಡಗಳು ಒಣಗಿಹೋದವು. ಎಷ್ಟೇ ಕಷ್ಟಪಟ್ಟು ಹುಡುಕಿದರೂ ಪ್ರಾಣಿ ಪಕ್ಷಿಗಳಿಗೆ ತಿನ್ನಲು ಸಣ್ಣ ತುಂಡು ಆಹಾರವೂ ಸಿಗಲಿಲ್ಲ.

ಆಗ ಆಮೆ ಹೀಗೆ ಹೇಳಿತು: "ಈಗಲಾದರೂ ನಿಮಗೆ ಅರ್ಥವಾಯಿತೇ? ಬೇರೆ ಹೊಲಕ್ಕೆ ಹೋದರೂ ಆ ರೈತರು ತಮ್ಮ ಬೆಳೆಯನ್ನು ಕಾಪಾಡಿಕೊಳ್ಳುತ್ತಾರೆ. ನಿಮಗೆ ಕೋಲು ತೋರಿಸುತ್ತಿದ್ದ ಆ ರೈತನೇ ಹೊಲದಲ್ಲಿ ಬಿತ್ತನೆ ಮಾಡಿ ಪೈರನ್ನು ಬೆಳೆಯುತ್ತಿದ್ದನು. ಅವನು ಇಲ್ಲದ ಮೇಲೆ ಈಗ ಇಡೀ ಹೊಲದಲ್ಲಿ ತಿನ್ನಲು ಏನೂ ಇಲ್ಲ."

ಪ್ರಾಣಿ ಪಕ್ಷಿಗಳಿಗೆ ತಮ್ಮ ತಪ್ಪಿನ ಅರಿವಾಗಿ ಅತ್ತವು. "ನಮಗೆ ಕಟ್ಟುಪಾಡು ಹಾಕಿದ್ದ ಆ ರೈತನೇ ನಮಗೆ ಉಣ್ಣಲು ಆಹಾರ ನೀಡುತ್ತಿದ್ದವನು, ನಾವು ಅವನನ್ನು ಶತ್ರು ಎಂದು ಭಾವಿಸಿದ್ದು ತುಂಬಾ ದೊಡ್ಡ ತಪ್ಪು" ಎಂದು ಒಪ್ಪಿಕೊಂಡವು.

ಕಥೆಯ ನೀತಿ:
ನಮ್ಮ ಜೀವನದಲ್ಲಿ ನಮಗೆ ಶಿಸ್ತು ಮತ್ತು ಕಟ್ಟುಪಾಡುಗಳನ್ನು ಕಲಿಸುವ ತಂದೆ-ತಾಯಿ, ಗುರುಗಳು ಅಥವಾ ನಮಗೆ ಅನ್ನ ನೀಡುವ ಯಜಮಾನರು ನಮ್ಮನ್ನು ತಡೆಯುತ್ತಾರೆ ಎಂಬ ಕಾರಣಕ್ಕೆ ಅವರನ್ನು ಶತ್ರುಗಳು ಎಂದು ಭಾವಿಸಬಾರದು. ಅವರು ನಮ್ಮ ಬದುಕಿಗೆ ಏನು ನೀಡುತ್ತಿದ್ದಾರೆ ಎಂಬುದು ಅವರು ಇಲ್ಲದಿದ್ದಾಗ ಮಾತ್ರ ನಮಗೆ ಅರ್ಥವಾಗುತ್ತದೆ. ಅವರು ಇರುವಾಗಲೇ ಅವರ ಮೌಲ್ಯವನ್ನು ತಿಳಿದುಕೊಳ್ಳಬೇಕು.